ಹೋದ್ರೆ ಹೋಯ್ತು, ಸಂಜೆ ಹೊತ್ತಿಗೆ ಅದರ ಗೂಡಿಗೆ ಅದು ಬರುತ್ತೆ. ಸಾಕಿದ್ದು ಎಲ್ಲಿಗೆ ಹೋಗುತ್ತೆ?' ಅಂದ. ಒಂದಿಲ್ಲೊಂದು ರೀತಿಯಲ್ಲಿ ಹಂದಿ ಓಡಿ ತಪ್ಪಿಸಿಕೊಳ್ಳಲು ಈ ಬುದ್ಧಿ ಇಲ್ಲದ ಹುಂಬ ನಿಂಗನೇ ಹೊಣೆಗಾರನೆಂದು ಗೊತ್ತಿದ್ದರೂ ನಂಜಣ್ಣ ಅವನೆದುರು ಏನೂ ಚಕಾರವೆತ್ತಲಿಲ್ಲ.

ನಂಜಣ್ಣನ ತಲೆಯೊಳಗೆ ಮೊಮ್ಮಗುವಿಗೆ ಮಾಡಿಸಬೇಕೆಂದಿದ್ದ ಒಡವೆಗಳ ವಿವರಗಳಿದ್ದ ಚೀಟಿಗಳು, ಹಂದಿಮಾಂಸದ ಪಾಲು ಬೇಕೆಂದಿದ್ದವರ ಹೆಸರುಗಳ ಚೀಟಿ ಜೇಬಲ್ಲಿದ್ದದ್ದು ನೆನಪಾದವು.

* * *

ಪಾಳು ಬಿದ್ದ ತುಂಡು ಗೋಡೆಯ ಮೇಲೆ ಅಲ್ಲಲ್ಲಿ ಕುಂತ ಕಾಗೆಗಳು ಅರಚತೊಡಗಿದವು. ಗದ್ದೆ ದಾಟಿ ಊರ ಹಾದಿಯಲ್ಲಿ ಹಂದಿ ಹಿಡಿಯಲು ಹೋದವರು, ಅವರ ಹಿಂದೆ ಹುಡುಗರು, ಮಕ್ಕಳು ಊರತ್ತ ಬರುತ್ತಿದ್ದರು. ಅಲ್ಲೇ ಕುಂತು ಎಲ್ಲವನ್ನೂ ನೋಡುತ್ತಿದ್ದ ಬಸಪ್ಪ ಇವರ ಮಾತುಗಳ ಕೇಳಿಸಿಕೊಂಡು 'ಸರಿಯಾಗಿ ಹುಡುಕೋದಲ್ವ... ಲೇ ಶಂಕ್ರ, ನಾನು ಇಲ್ಲಿಂದಲೇ ನೋಡ್ತಿದ್ದೆ. ಆ ಗದ್ದೆ ಒಳಗೋಗಿದ್ದು ಮತ್ತೆ ಆಚೆಕೆ ಬರಲಿಲ್ಲ. ನೀವು ಸರಿಯಾಗಿ ನೋಡಬೇಕಿತ್ತು' ಎಂದ ಬಸಪ್ಪನ ಮಾತಿಗೆ ಶಂಕ್ರ, 'ಅಯ್ಯೋ ಅದುನ್ನ ಗೂಡಲ್ಲೇ ಹಿಡಿಬಹುದಿತ್ತು. ಈ ಅಜ್ಜನ ಕೈಲಿ ಅದ ಬಗ್ಸಕ್ಕಾಗ್ಲಿಲ್ಲ ಅಷ್ಟೆ. ಅಲ್ಲಿ ಎತ್ತದ ಚಕಾರ ಇಲ್ಲಿ ಮೆಲ್ಲಗೆ ತೆಗೆದ. 'ಅಯ್ಯೋ ಅದ್ರ ಸೆಲ್ಗೆಟ್ಹೋಗ, ಅಜೋ ಅದನ್ನ ನೀನು ಹತ್ತಿರದಿಂದ ನೋಡಿಲ್ಲ ಅನ್ನಂಕಾಣ್ತದೆ, ನಾಲ್ಕು ಆಳು ಅಡ್ಡೆಕಟ್ಟಿ ಎತ್ತಿದ್ರೂ ಏಳಲ್ಲ. ಐದ್ನೆಯವ್ನು ಕೈ ಹಾಕಿದ್ರೆ ವಸಿ ಏಳುತ್ತೆ. ನಿಜವಾಗ್ಲೂ ಅದುನ್ನ ಹಿಡಿಯುವ ಧೈರ್ಯ ಯಾರಿಗೂ ಇರಲಿಲ್ಲ' ಅನ್ನುತ್ತ ಮನೆಕಡಿಕೆ ಹೆಜ್ಜೆ ಹಾಕಿದ.

ಈ ಬಸಪ್ಪ ಮುಂದೆ ಬರ ಅದ್ಯಾವ್ದೋ ಹಬ್ಬಕ್ಕೆ ಗೋಡೆಗೆ ಸುಣ್ಣ ಬಳಿಯಲು ಕುಚ್ಚುಮಟ್ಟೆ ಕಟ್ಟುತ್ತ ತನ್ನ ಕೆಲಸದಲ್ಲಿ ನಿರತನಾದ.

ಊರ ಹೆಬ್ಬಾಗಿಲತ್ತ ಮುಖಮಾಡಿ ಮಲಗಿದ್ದ ಕೆಲವು ಬೀದಿ ನಾಯಿಗಳು ಏನೋ ಶಬ್ದ ಕೇಳಿದಂತಾಗಿ ಎದ್ದು ಬೊಗಳುತ್ತಿದ್ದವು. ಅವುಗಳ ಬೊಗಳಾಟ ಜೋರಾಗಿ ಕೇರಿಯ ಜನ ಮನೆಯಿಂದ ಹೊರಬಂದು 'ಥೂ ಛೇ ಅಚೆ' ಕೈಗೆ ಸಿಕ್ಕಿದ್ದನ್ನು ಅವುಗಳ ಮೈಮೇಲೆ ತೂರುತ್ತಾ ಈ ಊರಿಗೆ ಹೊಸಬರು ಬರುವುದುಂಟೆ? 'ಈ ಹಾಳಾದ್ ನಾಯ್ಗಳು' ಅಂದು ಬೈಯುತ್ತ ಅವರ ಹತ್ತಿರದಲ್ಲೇ ಇದ್ದ ನಾಯಿಗಳಿಗೆ ಸಿಕ್ಕಸಿಕ್ಕ ಕಲ್ಲು ಎಸೆದು ಕಾಲು ಮುರಿಯುವಂತೆ ಹೊಡೆದೋಡಿಸಿದರು. ಈ ನಾಯಿಗಳು ಇಷ್ಟು ಜೋರಾಗಿ ಬೀದಿಯಲಿ ಕೋಲಾಹಲವನ್ನು ಎಬ್ಬಿಸುತ್ತಿರುವುದು ಯಾಕೆಂದು ಜಗಲಿಯ ಕಸ ಗುಡಿಸುತ್ತಿದ್ದ ವಡ್ಡರ ಹನುಮಕ್ಕ ಒಂದೆರಡೆಜ್ಜೆ ಆಚೆ ಬಂದು ಊರ ಹೆಬ್ಬಾಗಿಲತ್ತ ನೋಡಿದಳು.

ಮಲ್ಲನ ಎತ್ತಿನ ಗಾಡಿಯ ಚಕ್ರವನ್ನೇ ಕಚ್ಚುವಂತೆ ಆ ಕೇರಿಯ ನಾಯಿಗಳು ಹಲ್ಲು ಗಿಂಜಿ ನೋಡುವವರಿಗೆ ಭೀತಿ ಹುಟ್ಟಿಸುತ್ತಿದ್ದವು. ಅವುಗಳ ದೃಶ್ಯ ಕಂಡ ಹನುಮಕ್ಕ 'ಅಲ್ಲ, ಈ ಮಲ್ಲನ ಕಂಡ್ರೆ ಊರ ಮನುಷ್ಯರಿಗೆ ಮಾತ್ರ ಆಗಲ್ಲ ಅಂದ್ಕಂಡಿದ್ದೆ... ಇವತ್ತು ಗೊತ್ತಾತು, ಬೀದಿ ನಾಯ್ಗಳಿಗೂ ಇವನ್ನ ಕಂಡ್ರಾಗಲ್ಲ' ಅಂತ ಗೊಣಗಿಕೊಂಡು ವಾಪಸ್ಸು ಜಗಲಿಗೆ ಹೋದಳು. ತನ್ನ ಮನೆ ಮುಂದೆ ದನ ಕಟ್ಟಲು ಗೂಟ ಹೊಡೆಯುತ್ತಿದ್ದ ಬಸಪ್ಪನಿಗೆ ಹನುಮಕ್ಕನ ಗೊಣಗಾಟ ಕೇಳಿಸಿತು. 'ಏನಮ್ಮ ನಿನ್ಗೆ ಇವತ್ ಗೊತ್ತಾಯ್ತು?' ಎಂದು ನಕ್ಕು ದೂಳು ಮೆತ್ತಿಕೊಂಡ ಕೈ ಕೊಡವಿ ಮೇಲೆದ್ದ. ಎತ್ತಿನ ಗಾಡಿ ತನ್ನ ಪಾಡಿಗೆ ತಾನು ಮುಂದೆ ಹೋಯಿತು.

ಗುಂಪು ಗುಂಪಾಗಿ ಗಂಜಿಗೆರೆ ಕಾವಲಿಗೆ ಹಂದಿ ಹಿಡಿಯಲು ಹೋದವರ ಕಾಯುತ್ತಾ ತನ್ನ ಅಟ್ಟಿಯಲ್ಲಿ ಕಿವಿಯೇ ಕಣ್ಣಾಗಿ ಕುಂತಿದ್ದ ಕೆಂಚಜ್ಜ, ಶಂಕ್ರನ ದನಿಗೆ, 'ಏನೋ ಶಂಕ್ರ ಹಂದಿ ಹಚ್ಕಟ್ ಆಯ್ತ?' ಅಂದ. ಆ ಮಾತಿಗೆ ಶಂಕ್ರ ಬೇಸರಿಸಿ, 'ಸುಮ್ಮುನ್ ಕೂತ್ಕಜ್ಜ ನೀನು, ಇನ್ನೂ ಹಂದಿನೇ ಸಿಕ್ಕಿಲ್ಲ, ಆಗ್ಲೇ ಹಚ್ಕಟ್ಬಾಯ್ತು ಅಂತ ಬಂದಿದ್ದೀಯ. ಆ ನನ ಮಗುಂದು ಗದ್ದೆ ಒಳಗೋಗಿದ್ದು ಹೊರಗೇ ಬರಲಿಲ್ಲ' ಅಂದೋನು, ಒಂದು ಬೀಡಿ ಹಚ್ಚಿ ಎರಡು ರೌಂಡ್ ಹೊಗೆ ವಳಿಕೆಳೆದು ಆಚೆಕ್ ಬಿಟ್ಟು ಮಾತಾಡ್ತ: 'ಹಂದಿ ಒಳ್ಳೆ ಸಲಗ ಇದ್ದಂಗಿತ್ತು, ಕೈಗೆ ಸಿಕ್ಕಿದ್ದಿದ್ರೆ' ಅನ್ನುತ್ತಿದ್ದಂತೆ ಜೊಲ್ಲಿನ ಕಣವೊಂದು ನಾಲಿಗೆ ತುದಿವರೆಗೂ ಬಂದು ಅಲ್ಲಿಯೇ ಕರಗಿತು.

ಮಲ್ಲನ ಗಾಡಿಯು ಇವರ ಮುಂದೆ ಹಾಯ್ದು ಹೋಗುವಾಗ ಮಲ್ಲ ಕೂಗಿ ಹೇಳಿದ, 'ಅದ್ರವ್ವನ್ ತಪ್ಪಿಸ್ಕಂಡಿದ್ದೇ ಒಳ್ಳೇದಾಯ್ತು. ಅದನ್ನ ತಿಂದಿದ್ರೆ ಏನೂ ಇಲ್ಲ ಅಂತಂದ್ರೂ ಎರಡ್ ಮೂರ್ ದಿನ ಈ ಬೀದೀಲಿ ನಾವು ಓಡಾಡಂಗಿರ್ಲಿಲ್ಲ' ಎಂದವನು. ಅತ್ತ 'ಥೂ' ಅಂತ ಉಗಿದೋನು ಮುಂದಕ್ಕೆ ನಾಲ್ಕೆಜ್ಜೆ ಹೋಗ್ತಾ, 'ಈ ನನ್ಮಗ್ನವು ಮಾದಿಗ್ರು ಒಂದು ಖಂಡ್ಗ ತಿಂದು ಹಾದಿ ಬೀದಿಗೆ ತಿಕ ಹಾಕಿ ಕೂರ್ತಿದ್ರು' ಅನ್ನುತ್ತ ಮೂಗಿಗೆ ಅಸಹ್ಯ ಬಡಿದಂತಾಗಿ 'ಥೂ' ಎಂದು ಉಗಿದು ಎತ್ತುಗಳ ಅದ್ದಲಿಸುತ್ತ ಗಾಡಿ ಜೋರಾಗಿ ಓಡಿಸಿದ.

ಇಂತಹ ಕಿತಾಪತಿಯ ಜನರ ಬಗ್ಗೆ ಏನೆಂದು ಹೇಳುವುದು? ಈ ಮನುಷ್ಯ ದುಷ್ಟ ಎಂದು ಮನಸ್ಸಿನಲ್ಲಿ ಶಂಕರ ಅಂದುಕೊಂಡನಾದರೂ, ಮಲ್ಲನ ಮಾತು ಶಂಕ್ರನ ಎದೆಗೆ ಮುಳ್ಳಂತೆ ನಾಟಿ, 'ನಾವ್ ತಿನ್ನೋರು ತಿಂದ್ರೆ ಈ ನನ್ಮಗನ್ಗೇನು' ಎಂದು ಗೊಣಗಿದ. 'ಅದರ ರುಚಿ ಸಿಕ್ಕಿದ್ರೆ ಈ ಮುಂಡೇಮಗ ನಮ್ಗೂ ಒಂದು ಚೂರೂ ಸಿಗಲು ಬಿಡ್ತಿರ್ಲಿಲ್ಲ' ಎಂದು ಬೈದುಕೊಂಡು ಹೊರಟ. ಹಂದಿ ಮಾಂಸ ನೆನೆದು ತುಟಿ ಮೇಲೆ ನಾಲಿಗೆಯಾಡಿಸುತ್ತಿದ್ದ ಕೆಂಚಜ್ಜನು ಮಲ್ಲನ ಮಾತಿನಿಂದ ವಿಚಲಿತನಾಗಿ; 'ನನ್ಮಗ್ನುವೆ, ನನ್ನೆಂಡ್ತಿನುವೆ ನನ್ನ ತಿಪ್ಪೆ ಕಡಿಕೆ ಕರ್ಕಂಡೋಗಿ ಕೂರುಸ್ತಾಗ ಅದೆಲ್ಲೆಲ್ಲಿ ಕೂರುಸ್ತವೋ ನಾ ಬೇರೆ ಕಾಣೆ' ಎಂದು ಒಳಗೊಳಗೆ ಅಳುಕಿದ. ಮನಸ್ಸಿಗೆ ಒಂದು ಬಗೆಯ ಗುಂಗು ಹಿಡಿದ ಹಾಗೆ ಗಾಡಿ ಶಬ್ದ ಕೇಳದಂತಾಯಿತು.

* * *

'ಅವ್ವ, ಇಸ್ತ್ರಿ ಮಾಡಿಸ್ಕಂಡು ಬರ್ತೀನಿ' ಅಂದು ಪರಮ ಹೊರಟ. ಎದುರು ದಿಕ್ಕಿನಿಂದ ಪಾತ್ರೆ ಹೊತ್ಕೊಂಡು ಬರುತ್ತಿದ್ದ ಆ ತಳವಾರ್ ನಿಂಗಮ್ಮನನ್ನು ನೋಡಿದ ಪರಮನು 'ಅಮ್ಮೋ, ಹೂವಿನ ತೋಟದ ರಾಜ, ಪೆಟ್ಟಿಗೆಗೆ ಕಾವು ಹಾಕಿದ್ನ' ಅಂದು ಕೇಳಿದ. 'ಹೂಂ... ಹಾಕಿದ್ದ' ಅಂತ ಹೇಳಿದ ಅವಳು ತಲೆ ತಗ್ಗಿಸಿಕೊಂಡು ತುಟಿಯಂಚಿಗೆ ನಗು ತಂದುಕೊಂಡು ತನ್ನ ಬೊಗಸೆಗಣ್ಣುಗಳನ್ನು ಅರಳಿಸಿ ಆ ಕಡೆ ಮುಖ ಮಾಡಿ ಹೊರಟುಬಿಟ್ಟಳು. ಆ ನಗೆಯಲ್ಲಿ ಏನನ್ನೋ ಕಂಡವನಂತೆ ಭಾಸವಾಗಿ ವಿವರಿಸಲಾಗದ ಆ ಅನನ್ಯ ಅನುಭವವೊಂದನ್ನು ಮೆಲಕು ಹಾಕುತ್ತಾ ಪರಮನ ಮುಖದ ಬಣ್ಣವೇ ಬದಲಾಯಿತು. ಹೆಣ್ಣೊಬ್ಬಳು ನಕ್ಕಿದ್ದು ಅವನ ಎದೆಯೊಳಗೆ ಕಟ್ಟಿದ ಕನಸು ಕೆಂಗನಸಾಗಿ ಪರಿಣಮಿಸಿ ಮೈ ಮನಸೆಲ್ಲಾ ಕಂಗಾಲಾಗಿ ಪ್ರಾಯದ ಈ ಹುಡುಗ ನೆಲಕ್ಕೆ ಕಾಲು ತಾಗಿಸಿ ನಡೆಯುವುದ ಮರೆತೇ ಹೋಗಿದ್ದ. ಕಿವುಡಯ್ಯನ ಮನೆತವ ಕಿತ್ತೋದ ಚಪ್ಪಲಿಗೆ ಉಂಗುಷ್ಟ ಹಾಕಿಸುತ್ತ ನಿಂತಿದ್ದ ಲೋಕ ಅತ್ತ ಗಮನಿಸಿ 'ಅಣ್ಣ ಹೆಜ್ಜೆ ಮೇಲೆ ನಿಗಾ ಇರಲಿ' ಅಂದೋನು 'ಅದೇನ್ ನಿನ್ನ ನೋಡಿ ಆವಕ್ಕ ನಗೆಯಾಡ್ತು' ಎಂದು ಕೇಳಿದ. ಆ ಮಾತಿಗೆ ಪರಮೇಶನಿಗೆ ಒಳಗೊಳಗೆ ಸಂತಸ. ತನ್ನ ಚಿಗುರು ಮೀಸೆ ತಿರುವುತ್ತ ಸಿಳ್ಳೆಯಲ್ಲಿ 'ಯಾರೇ ಕೂಗಾಡಲಿ ಊರೇ ಹೋರಾಡಲಿ' ಹಾಡ ಹಾಡುತ್ತ ಬೀದಿಯಲ್ಲಿ ಸಾಗಿ ಹೂವಿನ ತೋಟದ ರಾಜನ್ನ ಸೇರಿದ.

(ಸಶೇಷ)

## ಪದರುಗಳು
## ಪ್ರತಿಕ್ರಿಯೆ

### ಪೋಷಕರನ್ನು ಎಚ್ಚರಿಸುವಂತಿದೆ

ಹತ್ತು ಕಂತುಗಳಲ್ಲಿ ಪ್ರಕಟವಾದ ವಿವೇಕಾನಂದ ಕಾಮತರ 'ಪದರುಗಳು' ಧಾರಾವಾಹಿ ಹೆಣ್ಣುಮಕ್ಕಳ ಪೋಷಕರನ್ನು ಎಚ್ಚರಿಸುವಂತಿತ್ತು. ನಮ್ಮ ಮಕ್ಕಳು ಮನೆಯಲ್ಲಿ ಸುರಕ್ಷಿತ ಎಂದು ಕಣ್ಣುಮುಚ್ಚಿ ಕೂರುವಂತಿಲ್ಲ. ಸದಾ ಎಚ್ಚರದಿಂದ ಇರಬೇಕು, ಮಕ್ಕಳ ಮಾತಿಗೆ ಕಿವಿಗೊಡಬೇಕು ಎಂಬುದನ್ನು ಕಾದಂಬರಿ ಸಾರಿದೆ. ಮೋನಪ್ಪ ಅವರ ಚಿತ್ರಗಳು ಸೊಗಸಾಗಿ ಮೂಡಿಬಂದಿವೆ.

—ನಾ.ರಾ. ಜ್ಯೋತಿ, ಬೆಂಗಳೂರು

### ಅದ್ಭುತ ಮನೋವಿಶ್ಲೇಷಣೆ

ಮನೋವಿಶ್ಲೇಷಣೆಯ ಏಣಿಯನ್ನು ಕಾದಂಬರಿ ಸುಲಭವಾಗಿ ಹತ್ತಿ ಇಳಿದಿದೆ. ಹಂತ ಹಂತವಾಗಿ ನಿವೇದಿತಾಳ ವಿಚಿತ್ರ ವರ್ತನೆಯ ಹಿನ್ನೆಲೆಯ ಇತಿಹಾಸವನ್ನು ಬಿಚ್ಚಿಹೇಳಿದ ಪರಿ ಅದ್ಭುತ.

—ಕೆ.ಎಂ. ಮಧ್ವರಾಯ, ಬೆಂಗಳೂರು